2. ಸಭಾಧ್ಯಕ್ಷರ ಚುನಾವಣೆ

ಹಂಗಾಮಿ ಅಧ್ಯಕ್ಷರು : ಈಗ ಸಭಾಧ್ಯಕ್ಷರ ಚುನಾವಣೆ. ಶ್ರೀ ಜಗದೀಶ್ ಶೆಟ್ಟರ್‌ವರನ್ನು ವಿಧಾನಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಶ್ರೀ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯವರು ಸೂಚಿಸುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ(ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ. ಶ್ರೀ ಜಗದೀಶ್ ಶೆಟ್ಟರ್‌ರವರನ್ನು 13ನೇ ವಿಧಾನ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ರೇವು ನಾಯಕ್ ಬೆಳಮಗಿ (ಸಚಿವರು) : ಮಾನ್ಯ ಅಧ್ಯಕ್ಷರೆ. ಶ್ರೀ ಬಿ.ಎಸ್. ಯಡಿಯೂರಪ್ಪನವರು ಸೂಚಿಸಿರುವ ಪ್ರಸ್ತಾಪವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಹಂಗಾಮಿ ಅಧ್ಯಕ್ಷರು ; ಶ್ರೀ ಬಿ.ಎಸ್. ಯಡಿಯೂರಪ್ಪನವರು ಸೂಚಿಸಿರುವ ಹಾಗೂ ಶ್ರೀ ರೇವು ನಾಯಕ್ ಬೆಳಮಗಿರವರು ಅನುಮೋದಿಸಿರುವ ಪ್ರಸ್ತಾಪ ಈ ರೀತಿ ಇದೆ.

"ಶ್ರೀ ಜಗದೀಶ್ ಶೆಟ್ಟರ್‌ರವರನ್ನು 13ನೇ ವಿಧಾವ ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸುವುದು."

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಹಂಗಾಮಿ ಅಧ್ಯಕ್ಷರು : ನೂತನ ಸಭಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಹೃತ್ಪೂರ್ವಕವಾಗಿ ನಾನು ಅಭಿನಂದಿಸುತ್ತೇನೆ. ಈಗ ಮಾನ್ಯ ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಈ ಸ್ಥಾನಕ್ಕೆ ಕರೆದುಕೊಂಡು ಬರಬೇಕೆಂದು ಸೂಚಿಸುತ್ತೇನೆ.

(ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಅಧ್ಯಕ್ಷರ ಪೀಠವನ್ನಲಂಕರಿಸಲು ಕರೆದುಕೊಂಡು ಬಂದರು)

(ಈ ಹಂತದಲ್ಲಿ ಹಂಗಾಮಿ ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು ಹಂಗಾಮಿ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದರು)

(ಈ ಹಂತದಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ. ಸದನದ ಗೌರವಾನ್ವಿತ ಸದಸ್ಯರೆ. ಕರ್ನಾಟಕದ 13ನೇ ವಿಧಾನಸಭೆಯ ನೂತನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವ ಶ್ರೀ ಜಗದೀಶ್ ಶೆಟ್ಟರ್‌ರವರನ್ನು ಮನತುಂಬಿ ನಾನು ಅಭಿನಂದಿಸುತ್ತೇನೆ. ಪ್ರಾರಂಭದಲ್ಲಿಯೇ ಸರ್ವಾನುಮತದಿಂದ ಆಯ್ಕೆಯಾಗಿರುವುದಕ್ಕೆ ಸಹಕಾರ ಕೊಟ್ಟ ಪ್ರತಿಪಕ್ಷದ ಎಲ್ಲಾ ನಾಯಕರನ್ನು ಮತ್ತು ಎಲ್ಲಾ ಸದಸ್ಯರನ್ನು ನಾನು ಅಭಿನಂದಿಸುತ್ತೇನೆ. ಸಮಚಿತ್ತದ. ಸಂಯಮಶೀಲ ಶ್ರೀ ಜಗದೀಶ್ ಶೆಟ್ಟರ್‌ರವರು ಅಪಾರ ಅನುಭವವುಳ್ಳವಂಥವರು. ಶಾಸಕರಾಗಿ. ವಿರೋಧಪಕ್ಷದ ನಾಯಕರಾಗಿ. ಸಚಿವರಾಗಿ. ನಮ್ಮ ಭಾರತೀಯ ಜನತಾಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವ ಅವರಿಗಿದೆ. ಸಭಾಧ್ಯಕ್ಷ ಸ್ಥಾನ ಈ ಸದನದ ಪರಮೋಚ್ಚ ಸ್ಥಾನ. ನನ್ನ ದೃಷ್ಟಿಯಿಂದ ಮುಖ್ಯಮಂತ್ರಿಗಿಂತಲೂ ಹಿರಿದಾದ ಸ್ಥಾನ. ಅಂಥ ಸ್ಥಾನಕ್ಕೆ ಜಗದೀಶ್ ಶೆಟ್ಟರ್‌ರವರು ಅವಿರೋಧವಾಗಿ ಆಯ್ಕೆಯಾಗಿರುವುದ ನಮ್ಮೆಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಈ ಕುಟುಂಬದ ಹಿನ್ನೆಲೆಯೆಂದರೆ ಸಭಾಧ್ಯಕ್ಷರಾದಂಥ ಶ್ರೀ ಜಗದೀಶ್ ಶೆಟ್ಟರ್‌ರವರ ಚಿಕ್ಕಪ್ಪನವರಾದ ದಿವಂಗತ ಸದಾಶಿವ ಶೆಟ್ಟರ್‌ರವರು 1976ರಲ್ಲಿ ಹುಬ್ಬಳ್ಳಿನಗರ ಕ್ಷೇತ್ರದಿಂದ ಜನಸಂಘದಿಂದ ವಿಧಾನಸಭೆಗೆ ಆಯ್ಕೆಯಾದಂಥ ಮೊದಲನೇ ವ್ಯಕ್ತಿ. ದಕ್ಷಿಣ ಭಾರತದಲ್ಲಿ ಜನಸಂಘದಿಂದ ಮೊದಲು ಶಾಸಕರಾದಂಥವರು. ಕರ್ನಾಟಕ ವಿಧಾನಸಭೆಯ ಅಧ್ಯಕ್ಷ ಪರಂಪರೆ ವಿಶಿಷ್ಟವಾದಂಥದ್ದು. ವೈಕುಂಠಬಾಳಿಗರಂಥ ಅನೇಕ ಹಿರಿಯರು. ಅತ್ಯಂತ ಸಮರ್ಥರು ಇಲ್ಲಿಯವರೆಗೆ ಈ ಸ್ಥಾನವನ್ನಲಂಕರಿಸಿ